# Karnataka Power Transmission Corporation Limited 01
## Departmental Examination – November-2022
## SAS PART-I PAPER -1
**(English/Kannada-Precise Writing & Drafting)**
**(Books, Guide, Notes etc. Are Not Allowed)**

**Date : 14.11.2022** **Maximum Marks : 100** **Time: 9:30 am TO 12:30 pm**

---

## PART-A

**1. Write a precise of the following passage in about one-third of its length in your own words with a suitable title. 10**

It is very easy to acquire bad habits, such as eating too many sweets or too much food, or drinking too much fluid of any kind, or smoking. The more we do such things, more we tend to like doing it or addicted to same; and if we do not continue to do it, we feel unhappy. This is called the force of habit, and the force of habit should be fought against.

Things which may be very good when only done sparingly, tend to become very harmful when done too often and too much. This applies even to such good things as work or rest. Some people have a bad habit of working too much, and others of idling too much. The wise man always remembers that this is true about himself, and checks any bad habit. He says to himself, "I am now becoming idle." Or "I like too many sweets," or "I smoke too much'' and then adds, "I will get myself out of this bad habit at once.''

One of the most widely spread bad habits is the use of tobacco. Tobacco is now smoked or chewed by men, often by women, and even by children, almost all over the world. It was brought into Europe from America by Sir Walter Raleigh, four centuries ago, and has thence spread everywhere. I very much doubt whether there is any good in the habit, even when tobacco is not used to excess; and it is extremely difficult to get rid of the habit when once it has been formed.

Alcohol is taken in almost all cool and cold climates, and to a very much less extent in hot ones. Thus, it is taken by people who live in the Himalaya Mountains, but not nearly so much by those who live in the plains of India. Alcohol is not necessary in any way to anybody. Millions of people are beginning to do without it entirely; and once the United States of America have passed laws which forbid its manufacture or sale throughout the length and breadth of their vast country. In India it is not required by the people at all, and should be avoided by them altogether. The regular use of alcohol, even in small quantities, tends to cause mischief in many ways to various organs of the body. It affects the liver, it weaken the mental powers, and lessens the general energy of the body.

**2. Read the following passage and answer the questions given below in your own words 10**

Global warming is the term used to describe a gradual increase in the average temperature of the Earth's atmosphere and its oceans. This causes a change in the

Earth's climate. Global warming occurs when carbon dioxide (CO2,) and other air pollutants and greenhouse gasses collect in the atmosphere and absorb sunlight and solar radiation that have bounced off the Earth's surface. Normally, this radiation would escape into space. But these pollutants, which can last for years even up to centuries in the atmosphere, trap the heat and make the planet warmer. This is known as the greenhouse effect.

Global warming has many environmental, economic, and health consequences. It will be manifested in the melting of the polar ice caps, as well as an increase in the occurrence verity of storms and other severe weather events such as wildfires. Rising sea levels could lead to coastal flooding. Thus, there could be pests, heat waves, heavy downpours and increased flooding as a result of global warming. And these could damage or destroy agriculture and fishing industry. Disruption of habitats such as coral reefs and the Alpine meadows could drive many plant and animal species to extinction. Allergies, asthma and infectious disease outbreaks will become more common due to higher levels of air pollution and the spread of conditions favourable to microorganisms and mosquitoes.

**Qestions:**

a) What is global warming?
b) What prevents radiations from escaping into space?
c) What is the greenhouse effect?
d) Mention two environmental effects of global warming;
e) How does global warming affect human health?

**3. Change the following sentences from Active voice to Passive voice:-** **5**

1. Columbus discovered America.
2. Rama was making a kite.
3. My father will write a letter.
4. He scored twenty runs.
5. Manners reveal character.

**4. Write the synonyms of the following words:** **5**

a) Imperative b) Crippling c) Perspicacity d) Provoke

e) Eradicate

**5. Insert the correct tense of verb in the following** **5**

a) It started to rain while we ________ tennis. (are playing, were playing, had played)
b) He ________here for the last five years. (worked, is working, has been working)
c) He thanked me for what I ________.(have done, had done, have been doing)
d) When he lived in Hyderabad, he ________ to the cinema once a week.(goes, went, was going)
e) I ________ Kumar this week. (haven't seen, didn't see, am not seeing)

6. **Use the following phrases in your own sentences.** **5**

a) A hard nut to crack

b) Better late than never

c) Bread and butter

d) Chasing rainbows

e) What goes around, comes around

7. **Translate the following passage given below to Kannada :** **10**

Regions around the globe are confronting water lack because of low precipitation and excessive groundwater consumption. In certain spots, the groundwater is either polluted or is wasted. Such misuse of natural water prompts dry season circumstances. High population growth additionally has a significant role in carrying out water exhaustion. More population implies more demand and henceforth more wastages. Also, according to the World Health Organization reports, around 844 million individuals don't have access to clean drinking water. This reality is sufficiently disturbing and makes it critical to spare water for ourselves and the future generation.

## PART B

8. Issue a meeting notice at Corporate office regarding monthly Sub-division wise Revenue review meeting and indicate that all the sub divisional officers, Divisional officers, AO's & AAO's to attend the meeting with all relevant details **10**

9. Draft a show cause notice to an Assistant Executive Engineer (El) from Superintending Engineer (El) for shortfall in revenue collection **10**

10. Draft a circular from chief financial officer to all the Accounts officers of division to follow time schedule to prepare and submit March final accounts within scheduled time **10**

11. In Writ Petition No: 980/2020 Hon'ble High Court has directed to implement the conditional incharge arrangements. In this context draft a notification from Director (A&HR), KPTCL, posting Accounts officers to the post of Deputy Controller of Accounts on Incharge arrangements. **10**

12. Draft an Official Memorandum from Administrator, HRD Center, KPTCL regarding 3 days Safety training with accommodation for Station Mech Gr-1 & 2, Powerman, Junior Powerman, Assistant Powerman and Junior Station Attendants working in KPTCL scheduled at HRD centre, Hoody from 05.12.2022 to 07.12.2022. **10**

# ಕನ್ನಡ

## ಭಾಗ–ಎ

**1. ಈ ಕೆಳಕಂಡ ಗದ್ಯಭಾಗವನ್ನು 3ನೇ ಒಂದರಷ್ಟಕ್ಕೆ ಸಂಕ್ಷಿಪ್ತಗೊಳಿಸಿ. ಸೂಕ್ತ ಶಿರೋನಾಮೆ ಬರೆಯಿರಿ** **10**

ನಮ್ಮ ದೇಶವು ಸಾಂಸ್ಕೃತಿಕ, ಶೈಕ್ಷಣಿಕ, ಧಾರ್ಮಿಕವಾಗಿ ಶ್ರೀಮಂತಗೊಂಡಿದೆ, ರಾಜಕೀಯವಾಗಿ ವಿವಿಧ ಪಕ್ಷಗಳ ರಾಜಕಾರಣಿಗಳು ವರ್ಣರಂಜಿತ ರಾಜಕಾರಣವನ್ನು ನಡೆಸಿದ ಇತಿಹಾಸವೂ ಕೂಡ ಇದೆ. ಜೊತೆಗೆ ರಾಜಕಾರಣದ ಮೌಲ್ಯಕ್ಕೆ ಅಪಚಾರವೆಸಗುವ, ಕೀಳು ಮಟ್ಟದ ರಾಜಕಾರಣ ನಡೆಸಿದ, ರಾಜಕಾರಣಕ್ಕೆ ಕಳಂಕ ತಂದ ರಾಜಕಾರಣಿಗಳ ಮಧ್ಯೆ ರಾಜಕಾರಣದಲ್ಲಿ ಅಜರಾಮರ ವಾಗಿ ಶಾಶ್ವತವಾಗಿ ನೆನಪಿಟ್ಟುಕೊಳ್ಳುವಂತಹ ಆದರ್ಶ ರಾಜಕಾರಣವನ್ನು ನಡೆಸಿದ ಮುತ್ಸದ್ದಿಗಳು ಕೂಡ ನಮ್ಮ ರಾಷ್ಟ್ರದ ಇತಿಹಾಸದಲ್ಲಿದೆ. ಸಾವಿರಾರು ವರ್ಷಗಳ ಕಾಲ ದೂರದೃಷ್ಟಿತ್ವದ ಯೋಜನೆಗಳನ್ನು ಜಾರಿಗೆ ತಂದು ಅಭಿವೃದ್ಧಿ ಕಾರ್ಯಗಳನ್ನು ನಡೆಸಿದ ಅಟಲ್ ಬಿಹಾರಿ ವಾಜಪೇಯಿ, ರಾಮಕೃಷ್ಣ ಹೆಗಡೆ, ದೇವರಾಜ ಅರಸು, ಎಸ್ ಬಂಗಾರಪ್ಪ, ಎಸ್‌ಆರ್ ಬೊಮ್ಮಾಯಿ, ಎಸ್.ಎಂ.ಕೃಷ್ಣ, ಉಳ್ಳಾಲ ಶ್ರೀನಿವಾಸ ಮಲ್ಯರಂತಹ ರಾಜಕಾರಣಿಗಳ ಹೆಸರು ಇಂದಿಗೂ ಜನಮಾನಸದಲ್ಲಿ ಅಚ್ಚಳಿಯದೆ ಉಳಿದಿದೆ. ಆದರೆ ಸಾಮಾಜಿಕವಾಗಿ ಅಸಮತೋಲನ, ಅಸಮಾನತೆ ಎಂಬುವುದು ಒಂದು ದೇಶದ ಪ್ರಗತಿಗೆ ಮಾರಕವಾಗಬಲ್ಲದು.ಜಾತಿ, ಧರ್ಮ, ಭಾಷೆ, ಪಂಥ, ವರ್ಣ ಎಂಬುದು ಇಂತಹ ಸಾಮಾಜಿಕ ಮತ್ತು ಮಾನವ ಸಂಬಂಧ, ಮಾನವೀಯತೆ ಸಹಬಾಳ್ವೆ, ಸಾಮರಸ್ಯಕ್ಕೆ ಇಂದು ಅಡ್ಡಿಯಾಗಿದೆ. ಹಸಿದವನಿಗೆ ತುತ್ತು ಅನ್ನ ನೀಡುವ, ವಾಸಕ್ಕೆ ಸೂರು ಕಲ್ಪಿಸುವ, ನೊಂದವರ ಕಷ್ಟಕ್ಕೆ ಮಿಡಿಯುವ ಮಾನವ ಗುಣ ಸಮಾಜದಲ್ಲಿ ವೃದ್ಧಿಯಾಗಬೇಕು. ಶಾಂತಿ ಸಾಮರಸ್ಯಕ್ಕೆ ಇಂದು ರಾಜಕಾರಣ ಎಂಬುದು ಎಳ್ಳುನೀರು ಬಿಟ್ಟಿದೆ.ರಾಜಕಾರಣಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಸಮಾಜದ ಯುವಕರ ಹಾದಿ ತಪ್ಪಿಸಿ ವಿವಿಧ ವ್ಯವಸ್ಥೆಗಳಡಿ ವಿಭಜಿಸಿ ಪರಸ್ಪರ ವಿರುದ್ಧ ದಿಕ್ಕಿಗೆ ಮುಖ ಮಾಡುವಂತೆ ರಾಜಕಾರಣ ಎಂಬ ವ್ಯವಸ್ಥೆ ಪ್ರೇರಣೆ ನೀಡಿದೆ. ನಮ್ಮ ಹಿರಿಯರ, ಪೂರ್ವಜರ ಕಾಲದಲ್ಲಿದ್ದ ಪರಸ್ಪರ ಸ್ನೇಹ ಸಂಬಂಧಗಳು, ಪರಸ್ಪರ ಸಹಕಾರ ಮನೋಭಾವ, ಹಂಚಿ ತಿನ್ನುವ ಗುಣ ಇಂದಿನ ಎರಡು ಮೂರು ತಲೆಮಾರಿನ ಯುವ ಪೀಳಿಗೆಯ ಕಾಲದಲ್ಲಿ ಧರ್ಮ ಧರ್ಮಗಳ ಮಧ್ಯೆ ಕಾದಾಟಗಳು, ಮತೀಯ ಅಮಲನ್ನು ತಲೆಗೇರಿಸಿ ಕೊಂಡು ಪರಸ್ಪರ ಬೀದಿ ಕಾಳಗಕ್ಕೆ ಮುನ್ನುಡಿ ಬರೆದಿರುವುದು ಒಂದೆಡೆಯಾದರೆ ಈ ಮಣ್ಣಿನ ಗೌರವ ರಾಷ್ಟ್ರೀಯ ಚಿಂತನೆಗಳಿಗೆ ವಿರುದ್ಧ ನಿಂತು ಅನ್ಯ ಧರ್ಮಗಳಿಗೆ ಅಪಚಾರವೆಸಗುವ, ಶ್ರದ್ಧಾ ಕೇಂದ್ರಗಳನ್ನು ಅಪವಿತ್ರಗೊಳಿಸುವ ಮಟ್ಟಕ್ಕೆ ಬಂದು ತಲುಪಿರುವ ವಿಚಾರ ಖೇದಕರ. ಈ ಎಲ್ಲಾ ಬೆಳವಣಿಗೆಗಳ ಹಿನ್ನಲೆಯಲ್ಲಿ ಸಮಾಜದಲ್ಲಿ ಒಂದು ರೀತಿಯ ದ್ವೇಷ ಅಸೂಯೆ ಭಾವನೆ ಸೇರಿದಂತೆ ಒಂದು ಪ್ರದೇಶ ಹೊಂದಬೇಕಾದ ಅಭಿವೃದ್ಧಿ ಕಾರ್ಯಗಳ ಕುಂಠಿತ ಆ ಪ್ರದೇಶಕ್ಕೆ ಬರಬೇಕಾದ ಬಹುದೊಡ್ಡ ಕಂಪನಿಗಳ, ಬೃಹತ್ ಯೋಜನೆಗಳಿಗೆ ಹಿಂದೇಟು ಸೇರಿದಂತೆ ಒಂದಷ್ಟು ಹಿನ್ನಡೆ ಉಂಟಾಗುತ್ತಿರುವುದು ಸುಳ್ಳಲ್ಲ. ಸಾಮಾಜಿಕವಾಗಿ ಸಾಮರಸ್ಯ ಐಕ್ಯತೆ ಮೂಡಿದಾಗ ಸಮಾಜದಲ್ಲಿ ನೆಮ್ಮದಿ ನೆಲೆಸಿ ಮನುಷ್ಯನ ಪರಿಪೂರ್ಣ ಬದುಕು ಸಾಗಲು ಸಾಧ್ಯ.

**2. ಈ ಲೇಖನವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:–** **10**

ಆಧುನಿಕ ಯುಗವನ್ನು ವಿಜ್ಞಾನ ಯುಗವೆಂದೇ ಕರೆಯುವುದುಂಟು. ಈ ಯುಗದಲ್ಲಿ ವಿಜ್ಞಾನದಿಂದ ದೊರೆತ ಸೌಲಭ್ಯಗಳು ನೂರಾರು ಇವೆ. ಈ ಸೌಲಭ್ಯಗಳು ಆಧುನಿಕ ಜೀವನದಲ್ಲಿ ಬೇರ್ಪಡಿಸಲಾಗದಷ್ಟು ಅವಿನಾಭಾವದಿಂದ ಜೊತೆಗೂಡಿ ಪ್ರಗತಿಗೆ ಕಾರಣವೂ ಆಗಿದೆ. ವಿದ್ಯುತ್, ಕಾಗದ, ಮುದ್ರಣ, ಔಷಧಿಗಳು, ಯಂತ್ರಗಳು, ರೇಡಿಯೋ ಇತ್ಯಾದಿಗಳೆಲ್ಲವೂ ಆಧುನಿಕ ಜೀವನದಲ್ಲಿ ಹಾಸುಹೊಕ್ಕಾಗಿ ಮಾನವಕೋಟಿಯ ಸೇವೆಗೆ ಸಿದ್ಧವಾಗಿವೆ. ಇವೆಲ್ಲವೂ ವಿಜ್ಞಾನದ ಕೊಡುಗೆಗಳೇ ಹೌದು.

ವಿಜ್ಞಾನದ ಸಾಧನೆ ಸಿದ್ದಿಗಳು ಮಾನವರ ಬುದ್ದಿ ಭಾವನೆಗಳನ್ನು ಅರಳಿಸಿವೆ. ಮಾನವನ ಸ್ವಭಾವವನ್ನು ವೈಜ್ಞಾನಿಕ ಮನೋಧರ್ಮವಾಗಿ ಪರಿವರ್ತಿಸಿದೆ. ಈ ಮನೋಧರ್ಮದಿಂದ ಸೌಲಭ್ಯಗಳ ಪ್ರಯೋಜನವನ್ನು ಮಾನವರು ಹೆಚ್ಚು ಹೆಚ್ಚಾಗಿ ಪಡೆಯಲು ಸಾಧ್ಯವಾಗಿದೆ. ವಿಜ್ಞಾನವು ಪ್ರಕೃತಿಯ ಗುಲಾಮನಾಗಿದ್ದ ಮಾನವನನ್ನು ಬಿಡುಗಡೆ ಮಾಡಿ ಅವನಿಗೆ ಸಾಹಸಗಳ ದಿಕ್–ದಿಗಂತಗಳನ್ನೇ ಸಾರಿತೋರುತ್ತಿದೆ. ವಿಚಿತ್ರ ಮೂಢನಂಬಿಕೆಗಳು ಜೀವನದ ಸಂಕುಚಿತಗಳು, ರೂಢಿರಾಕ್ಷಸರು ಮೊದಲಾದುವನ್ನೆಲ್ಲ ವಿಜ್ಞಾನವು ತೊಡೆದುಹಾಕುತ್ತಿದೆ. ವಿಜ್ಞಾನವು ಜನತೆಯ ಅಜ್ಞಾನ, ಮತಿ ದಾರಿದ್ರ್ಯ, ಬಡತನ, ವಿಚಿತ್ರ ಮೂಢಸ್ವಭಾವ, ನಿಸರ್ಗ ಭೀತಿ ಮೊದಲಾದವನ್ನು ಹೊಡೆದೋಡಿಸಿದೆ.

ವಿಜ್ಞಾನವು ಮಾನವನ ದೈಹಿಕ ಶ್ರಮದ ಪ್ರಮಾಣವನ್ನು ವಿಶೇಷವಾಗಿ ಕಡಿಮೆಗೊಳಿಸಿದೆ. ಅನೇಕ ದಿನಗಳ ಕಾಲ ಮಾಡಬಹುದಾದುದನ್ನು ಕೆಲವೇ ನಿಮಿಷಗಳಲ್ಲಿ ವಿಜ್ಞಾನ ಮಾಡಿ ಮುಗಿಸುತ್ತದೆ.ಇದರ ಪರಿಣಾಮವಾಗಿ ಇತರ ವಿಚಾರಗಳತ್ತ ಬುದ್ಧಿ-ಭಾವಗಳನ್ನು ಮತ್ತಷ್ಟು ಚುರುಕುಗೊಳಿಸಲು ಸಾಧ್ಯವಾಗಿದೆ.ಯಂತ್ರಗಳು ಮಂತ್ರದೋಪಾದಿ ಕೆಲಸ ಮಾಡುತ್ತಿವೆ. ಇಂದು ಯಂತ್ರಗಳು ಪ್ರಧಾನವಾಗಿವೆ. ಯಂತ್ರಶಕ್ತಿಯಿಂದ ವ್ಯವಸಾಯ, ಕೈಗಾರಿಕೆ, ವಾಣಿಜ್ಯ, ಆರೋಗ್ಯ ಮೊದಲಾದ ಕ್ಷೇತ್ರಗಳಲ್ಲಿ ಅಪಾರ ಬೆಳವಣಿಗೆಗಳು ನಡೆದು ಇವೆಲ್ಲವೂ ಮಾನವನ ಸುಖಜೀವನಕ್ಕೆ ಕಾರಣವೂ ಸಹಾಯಕವೂಆಗಿದೆ.

ವಿಜ್ಞಾನವು ಮಾನವಕೋಟಿಯ ಬೌದ್ಧಿಕ ಪ್ರಗತಿಗೆ ನೆರವಾಗಿರುವಂತೆಯೇ ನಾಗರಿಕತೆಯ ಪ್ರಗತಿಗೂ ಕಾರಣವಾಗಿದೆ. ಉಡುಪು, ಸಾರಿಗೆ ಸಂಪರ್ಕ, ವಾಣಿಜ್ಯ ಮೊದಲಾದವುಗಳನ್ನು ಬಹು ದೂರದ ಸ್ಥಳದವರೂ ತಿಳಿಯುವ, ಕಾಣುವ ಸೌಲಭ್ಯವಿದೆ. ರೇಡಿಯೋ, ವಿಮಾನ, ರೈಲು ಮೊದಲಾದ ಸಹಸ್ರಾರು ಅನುಕೂಲಕರ ಅಂಶಗಳನ್ನಲ್ಲದೆ, ವಿಜ್ಞಾನದ ನೆರವಿನಿಂದ ಕೆಲವು ಅಂಶಗಳು ಅಟೋಮ್ಯಾಟಿಕ್ ಆಗುತ್ತಿವೆ. ದಿನದಿನಕ್ಕೂ ಹೊಸ ಹೊಸ ಶೋಧಗಳು ಕಂಡುಬರುತ್ತಿವೆ. ವಿಜ್ಞಾನದ ನೆರವಿನಿಂದ ಅನೇಕ ರೋಗಗಳೂ ಓಡಿ ಹೋಗುತ್ತಿವೆ. ಆಧುನಿಕ ಯುಗದ ಕಾರ್ಖಾನೆಗಳೆಲ್ಲವೂ ವಿಜ್ಞಾನದ ಸಂಶೋಧನೆಯ ಫಲಗಳೇ ಆಗಿವೆ. ಕಾರ್ಖಾನೆಗಳಲ್ಲಿ ಸಹಸ್ರಾರು ಮಂದಿ ಕೆಲಸಮಾಡಿ ತಮ್ಮ ಜೀವನ ಸಾಗಿಸುತ್ತಿದ್ದರೆ ದೇಶದ ಆರ್ಥಿಕ, ಸಾಮಾಜಿಕ, ಬೌದ್ಧಿಕ ಬೆಳವಣಿಗೆಯೂ ಸಾಧ್ಯವಿದೆ. ಹೀಗೆ ವಿಜ್ಞಾನವು ಮಾನವ ಸೇವೆಯಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿದೆ.

**ಪ್ರಶ್ನೆಗಳು:**

ಎ) ಆಧುನಿಕ ಯುಗವನ್ನು ವಿಜ್ಞಾನ ಯುಗವೆಂದು ಕರೆಯಲು ಕಾರಣವೇನು? ವಿಜ್ಞಾನದ ಕೊಡುಗೆಗಳು ಯಾವುವು? ವಿವರಿಸಿ.

ಬಿ) ವಿಜ್ಞಾನದ ಸಾಧನೆ- ಸಿದ್ಧಿಗಳು ಏನು ಮಾಡಿವೆ? ವಿಜ್ಞಾನ ಏನನ್ನು ಹೊಡೆದೋಡಿಸಿದೆ?

ಸಿ)ವಿಜ್ಞಾನವು ಮಾನವನ ದೈಹಿಕ ಶ್ರಮವನ್ನು ಹೇಗೆ ಕಡಿಮೆ ಗೊಳಿಸಿದೆ?ಮಾನವನ ಸುಖ ಜೀವನಕ್ಕೆ ಯಾವುದೆಲ್ಲ ಕಾರಣವಾಗಿವೆ?

ಡಿ) ನಾಗರಿಕತೆಯ ಪ್ರಗತಿಗೆ ವಿಜ್ಞಾನ ಹೇಗೆ ಕಾರಣವಾಗಿದೆ? ವಿವರಿಸಿ.

ಇ) ವಿಜ್ಞಾನದ ನೆರವಿನಿಂದ ಏನಾಗುತ್ತದೆ? ಮಾನವ ಸೇವೆಯಲ್ಲಿ ವಿಜ್ಞಾನ ಹೇಗೆ ಮಹತ್ತರವಾದ ಪಾತ್ರವನ್ನು ವಹಿಸಿದೆ?

**3. ಈ ಕೆಳಗಿನ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯ ರಚಿಸಿ : 6**

ಅ. ಅಧ್ಯಾದೇಶ

ಆ. ಉಪಲಬ್ಧ

ಇ. ಜಾರಿಗೊಳಿಸು

ಈ. ನಿಷ್ಪಕ್ಷಪಾತ

ಉ. ಪದನಿಮಿತ್ತ

ಊ. ಪೂರ್ವಾಗ್ರಹ

**4.ಈ ಕೆಳಗಿನ ತತ್ಸಮಗಳಿಗೆ ತದ್ಭವಗಳನ್ನು ಬರೆಯಿರಿ:- 5**

ಅ) ದ್ಯೂತ ಆ) ಕುಠಾರ ಇ) ಯೌವನ ಈ) ಬ್ರಹ್ಮ ಉ) ಮೃಗ

**5. ಈ ಕೆಳಗಿನ ಗಾದೆಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ವಿಸ್ತರಿಸಿ ಬರೆಯಿರಿ:- 10**

1) ಅರ್ಧ ಕಲಿತವನ ಅಬ್ಬರ ಹೆಚ್ಚು.
2) ಅಲಗಿನ ಗಾಯಕ್ಕಿಂತ ಗಲಗಿನ ಗಾಯ ಹೆಚ್ಚು.
3) ಅಲಲಾ ಅನ್ನೂ ಅಳ್ಳಿ-ಮರ ನಂಬಬಹುದು, ಮೆತ್ತಗಿರೂ ಕಳ್ಳಿ-ಗಿಡ ನಂಬಲಾಗದು.
4) ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧರಾತ್ರೀಲಿ ಕೊಡೆ ಹಿಡಿದ ಹಾಗೆ.
5) ಅಲ್ಪರ ಸಂಘ ಅಭಿಮಾನ ಭಂಗ.

**6. ಈ ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ:-** **5**

1) ಆಯ
2) ಹಸಿ
3) ಜನನ
4) ಉಷ್ಣ
5) ಮೂಡಣ

**7. ಈ ಕೆಳಗಿನ ವಾಕ್ಯಗಳಿಗೆ ಒಂದೇ ಪದವನ್ನು ಬರೆಯಿರಿ:** **5**

ಎ) ನಮಗೆ ಅರ್ಥವಾಗದೇ ಉಳಿಯುವ ವಿಷಯ
ಬಿ) ನೀರಿನಿಂದ ಆವೃತವಾಗಿರುವ ಸುತ್ತಮುತ್ತಲ ಪ್ರದೇಶ
ಸಿ) ಮರಣ ನಂತರ ಮಾಡುವ ವೈದ್ಯಕೀಯ ಪರಿಶೀಲನೆ
ಡಿ) ನೀರಿನ ಕೊರತೆಗಾಗಿ ಮಳೆಗಾಲದಲ್ಲಿ ನೀರನ್ನು ಶೇಖರಿಸುವ ವಿಧಾನ
ಇ) ಗಂಟೆಗಟ್ಟಲೆ ಮಿತಿಯಿಲ್ಲದೆ ಮಾತನಾಡುವ ಕ್ರಿಯೆ

**8 ಈ ಕೆಳಗಿನ ಯಾವುದಾದರೂ ನಾಲ್ಕು ಪದಗಳಿಗೆ ಸಂಧಿಯ ಹೆಸರನ್ನು ಬರೆಯಿರಿ.** **4**

ಅ) ಮಳೆಗಾಲ
ಆ) ವಿದ್ಯಾಭ್ಯಾಸ
ಇ) ಸುರೇಶ
ಈ) ಐಕ್ಯೈಕ
ಉ) ಕೋಟ್ಯಾಧೀಶ

# ಭಾಗ-ಬಿ

**9.** ಎಲ್ಲಾ ಉಪವಿಭಾಗಗಳಿಗೆ, ವಿವಿಧ ಜಕಾತಿ ದರದ ಅಡಿಯಲ್ಲಿ ಸಾಕಷ್ಟು 2 ಎಂಎಂಡಿ ಸಂಗ್ರಹಣೆಯ ವಸೂಲಾತಿ ಕುರಿತಂತೆ ಹಣಕಾಸು ಸಲಹೆಗಾರರಿಂದ ಕರಡು ಪತ್ರವನ್ನು ತಯಾರಿಸಿ, ಪ್ರತಿಗಳನ್ನು ಎಲ್ಲಾ ಮುಇಂ(ವಿ)/ಅಇಂ(ವಿ)/ಕಾಇಂ(ವಿ)ಗಳಿಗೆ ಗುರುತಿಸಿ. **10**

**10.** ವಲಯದ ಮುಖ್ಯ ಇಂಜಿನಿಯರ್(ವಿ)ರವರಿಂದ, ಕಾಮಗಾರಿಗಳ ಕೆಲಸ ಪೂರ್ಣಗೊಂಡ ನಂತರ ಮುಕ್ತಾಯ ವರದಿಗಳ ಸಲ್ಲಿಕೆಗೆ ವಿಳಂಬವಾಗುತ್ತಿರುವ ವಿಷಯಕ್ಕೆ ಸಂಬಂಧಿಸಿದಂತೆ, ಎಲ್ಲಾ ವೃತ್ತಗಳ ಅಇಂ(ವಿ)/ವಿಭಾಗಗಳ ಕಾಇಂ(ವಿ) ರವರಿಗೆ ಸುತ್ತೋಲೆಯನ್ನು ಸಿದ್ಧಪಡಿಸಿ. **10**

**11.** ಕಂದಾಯ ವಸೂಲಾತಿಯಲ್ಲಿ ಕೊರತೆ ಉಂಟಾಗಿರುವುದಕ್ಕೆ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಇವರಿಗೆ ವೃತ್ತದ ಅಧೀಕ್ಷಕ ಅಭಿಯಂತರರು(ವಿ), ರವರಿಂದ ಕಾರಣ ಕೇಳುವ ನೋಟಿಸ್ ಜಾರಿ ಮಾಡುವ ಬಗ್ಗೆ. **10**

**12.** ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ ರವರು ಮಹಿಳಾ ಸರ್ಕಾರಿ ನೌಕರರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ತಿಳಿಸಿರುವುದರಿಂದ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ) ಕವಿಪ್ರನಿನಿ, ಬೆಂಗಳೂರು ರವರಿಂದ ಎಲ್ಲಾ ಪ್ರಸರಣ ವಲಯಗಳ ಮುಖ್ಯ ಇಂಜಿನಿಯರ್(ವಿ) ರವರುಗಳಿಗೆ ಒಂದು ಕರಡು ಸುತ್ತೋಲೆ ಹೊರಡಿಸಿರಿ. **5**

**13.** ಸಿ ಮತ್ತು ಡಿ ಗುಂಪಿನ ನೌಕರರ ಪಿಂಚಣಿ ಸವಲತ್ತುಗಳನ್ನು ಮಂಜೂರು ಮಾಡಲು ಪಿಂಚಣಿ ಕಡತ ಮತ್ತು ಸೇವಾ ಪುಸ್ತಕವನ್ನು ಸಲ್ಲಿಸುವ ಬಗ್ಗೆ, ಮುಖ್ಯ ಪ್ರಧಾನ ವ್ಯವಸ್ಥಾಪಕರು (ಹ & ವಾ), ಕಂಪನಿ ಕಾರ್ಯಾಲಯ, ಬೆವಿಕಂ ಬೆಂಗಳೂರುರವರಿಂದ ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಬೆವಿಕಂ, ಕಾರ್ಯ ಮತ್ತು ಪಾಲನೆ ವೃತ್ತ ರವರುಗಳಿಗೆ ಒಂದು ಕರಡು ಪತ್ರವನ್ನು ಬರೆಯಿರಿ. **10**

******